# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ.ಎನ್. ಜವರಾಯಿಗೌಡ ಇವರು ನಿಯಮ-72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

### : ಪ್ರಶ್ನೆ:

ಬೆಂಗಳೂರು ಮೆಟ್ರೋ ರೈಲ್ ನಿಗಮದ ಎರಡನೇ ಹಂತದ ವಿಸ್ತರಿತ ಮಾರ್ಗ ರೀಚ್-3ಸಿ ಯೋಜನೆಯಡಿಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ-1 ಹೋಬಳಿ ದೊಡ್ಡಬಿದರಕಲ್ಲು ಗ್ರಾಮಕ್ಕೆ ಸೇರಿದ ಸ.ನಂ:121/2ಬಿ, 122/2ಬಿ ಮತ್ತು 122/3ಗಳ ಪೈಕಿ ಒಟ್ಟು 1309.00 ಚ.ಮೀಟರ್ ವಿಸ್ತೀರ್ಣದ ಜಮೀನಿನಲ್ಲಿ ಮೆಟ್ರೋ ನಿಲ್ದಾಣ ನಿರ್ಮಾಣವಾಗಿರುತ್ತದೆ. ಈ ನಿಲ್ದಾಣಕ್ಕೆ ಈಗ ಮಂಜುನಾಥ ನಗರ ಮೆಟ್ರೋ ನಿಲ್ದಾಣ ಎಂದು ನಾಮಕರಣ ಮಾಡಲಾಗಿದೆ. ಕಂದಾಯ ದಾಖಲೆಗಳಲ್ಲಿ ಎಲ್ಲೂ ಮಂಜುನಾಥನಗರ ಅಂತ ಇಲ್ಲ. ದೊಡ್ಡಬಿದರಕಲ್ಲು ಎಂದೆ ಇದೆ. ಹೀಗಿರುವಾಗ ಮಂಜುನಾಥನಗರ ಎಂಬುದು ಒಂದು ಚಿಕ್ಕ ಖಾಸಗಿ ಬಡಾವಣೆಯ ಅನಧಿಕೃತ ಹೆಸರು. ನಿಯಮಾನುಸಾರವಾಗಿ ದೊಡ್ಡಬಿದರಕಲ್ಲು ಮೆಟ್ರೋ ನಿಲ್ದಾಣ ಎಂಬುದಾಗಿ ನಾಮಕರಣ ಮಾಡಲು ಕಾರ್ಯಚರಣೆಗೊಳ್ಳುವುದಕ್ಕೂ ಮುಂಚಿತವಾಗಿ ಎಲ್ಲಾ ದಾಖಲೆಗಳನ್ನು ಸಲ್ಲಿಸಿ, ದೊಡ್ಡಬಿದರಕಲ್ಲು ಗ್ರಾಮದ ನಿವಾಸಿಗಳು ಸಂಘ ಸಂಸ್ಥೆಗಳು ವಿವಿಧ ಶಿಕ್ಷಣ ಮತ್ತು ಸಾಂಸ್ಕೃತಿಕ ಸಂಘ ಸಂಸ್ಥೆಗಳ ಜೊತೆಗೆ ಬಿಬಿಎಂಪಿಯ ದೊಡ್ಡಬಿದರಕಲ್ಲು ವಾರ್ಡ್ ನಂ.40 ರ ನಿಕಟಪೂರ್ವ ಸದಸ್ಯರಾದ ಶ್ರೀಮತಿ, ಟಿ.ಎ. ಗಾಯತ್ರಿ ರವರು, ಗೌರವಾನ್ವಿತ ನಿಕಟಪೂರ್ವ ಪ್ರಧಾನ ಮಂತ್ರಿಯವರಾದ ಸನ್ಮಾನ್ಯ ಶ್ರೀ ಹೆಚ್.ಡಿ. ದೇವೆಗೌಡರವರು ಸಹ ಮೆಟ್ರೋ ಸಂಸ್ಥೆಗೆ ಮನವಿ ಸಲ್ಲಿಸಿ ವಿನಂತಿಸಿಕೊಳ್ಳಲಾಗಿತ್ತು. ಇದೇ ಹಸಿರು ಮಾರ್ಗದಲ್ಲಿ ಅಕ್ಕಪಕ್ಕದಲ್ಲಿ ದೊಡ್ಡ ದೊಡ್ಡ ಮಹಲ್ ಗಳು, ಆರ್.ಎನ್.ಎಸ್. ಸಂಸ್ಥೆಗಳು, ಮಿಲಿಟರಿ ಕ್ಯಾಂಪ್‌ಗಳು ಇದ್ದರೂ ಸಹ ಗೊರಗುಂಟೆಪಾಳ್ಯ ಎಂದೆ, ಪೀಣ್ಯದಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳಿದ್ದರೂ ಸಹ ಪೀಣ್ಯ ಎಂದೇ, ನಾಗಸಂದ್ರ ಗ್ರಾಮವನ್ನು ನಾಗಸಂದ್ರ ಎಂದೇ ಹೊಸಹಳ್ಳಿ ಗ್ರಾಮದ ಅಕ್ಕಪಕ್ಕದಲ್ಲಿ ದೊಡ್ಡ ದೊಡ್ಡ ಶಿಕ್ಷಣ ಸಂಸ್ಥೆಗಳು, ಆದಿಚುಂಚನಗಿರಿ ಮಠವಿದ್ದರೂ ಸಹ ಹೊಸಹಳ್ಳಿ ಎಂದೇ ಆಯಾ ಮೆಟ್ರೋ ನಿಲ್ದಾಣಗಳಿಗೆ ಹೆಸರಿಡಲಾಗಿದೆ. ಇನ್ನು ಅನೇಕ ಗ್ರಾಮಗಳ ಹೆಸರುಗಳನ್ನು ಆಯಾ ಮೆಟ್ರೋ ನಿಲ್ದಾಣಕ್ಕೆ ಇಡಲಾಗಿದೆ. ವಿಷಯ ಹೀಗಿದ್ದರೂ, ಯಾವುದೋ ಒಂದು ಅನಧಿಕೃತ ಚಿಕ್ಕ ಬಡಾವಣೆ ಹೆಸರನ್ನು ಅವೈಜ್ಞಾನಿಕವಾಗಿ ಮಂಜುನಾಥನಗರ ಮೆಟ್ರೋ ನಿಲ್ದಾಣ ಎಂದು ಇಟ್ಟಿರುವುದರಿಂದ ದೊಡ್ಡಬಿದರಕಲ್ಲು ಗ್ರಾಮಸ್ಥರಿಗೆ ಅಕ್ಕಪಕ್ಕದ ನಿವಾಸಿಗಳಿಗೆ ಘಾಸಿಯಾಗಿರುತ್ತದೆ.

ಆದ್ದರಿಂದ, ಸರ್ಕಾರ ಈ ಬಗ್ಗೆ ವೈಜ್ಞಾನಿಕವಾಗಿ ಕ್ರಮಬದ್ಧವಾಗಿ, ನಿಯಮಾನುಸಾರ ತಾಂತ್ರಿಕವಾಗಿ ಸಲ್ಲಿಸಿರುವ ಮನವಿಯನ್ನು ಮತ್ತೊಮ್ಮೆ ಮರು ಪರಿಶೀಲಿಸಿ, ಮಂಜುನಾಥನಗರ ಮೆಟ್ರೋ ನಿಲ್ದಾಣ ಎಂದು ನಾಮಕರಣ ಮಾಡಿರುವುದನ್ನು ಮಾರ್ಪಡಿಸಿ, ಸರ್ಕಾರದ ಕಂದಾಯ ದಾಖಲೆಯಲ್ಲಿರುವ, ಪೂರ್ವಜನರ ಪುರಾತನ ಕಾಲದಿಂದ ಬಂದಿರುವ ದೊಡ್ಡಬಿದರಕಲ್ಲು ಗ್ರಾಮದ ಹೆಸರನ್ನೇ "ದೊಡ್ಡಬಿದರಕಲ್ಲು ಮೆಟ್ರೋ ನಿಲ್ದಾಣ" ಎಂದು ಮರು ನಾಮಕರಣ ಮಾಡಲು ಸರ್ಕಾರದ ಗಮನ ಸೆಳೆದಿರುವ ಕುರಿತು.

**: ಉತ್ತರ :**

ಬೆಂಗಳೂರು ಮೆಟ್ರೋ ರೈಲು ಯೋಜನೆಯ ಹಂತ-2ರ ಮಂಜುನಾಥ ನಗರ ಮೆಟ್ರೋ ನಿಲ್ದಾಣವು ದೊಡ್ಡಬಿದರಕಲ್ಲು ಗ್ರಾಮದಿಂದ 2.3 ಕಿ.ಮೀ.ಗಳ ಅಂತರದಲ್ಲಿ ಹಾಗೂ ದೊಡ್ಡಬಿದರಕಲ್ಲು ಗ್ರಾಮದ ಗಡಿಯಿಂದ 1.9 ಕಿ.ಮೀ.ಗಳ ಅಂತರದಲ್ಲಿರುತ್ತದೆ. ಆದರೆ, ಪ್ರಸ್ತುತ ಮಂಜುನಾಥ ನಗರ ಮೆಟ್ರೋ ನಿಲ್ದಾಣವು ಮಂಜುನಾಥ ನಗರ ಮುಖ್ಯ ರಸ್ತೆಯಿಂದ ಕೇವಲ 0.87 ಕಿ.ಮೀ ಗಳ ಅಂತರದಲ್ಲಿರುತ್ತದೆ.

ಆದ್ದರಿಂದ, ಸದರಿ ಮೆಟ್ರೋ ನಿಲ್ದಾಣಕ್ಕೆ ಮಂಜುನಾಥ ನಗರ ಮೆಟ್ರೋ ನಿಲ್ದಾಣವೆಂದು ನಾಮಕರಣ ಮಾಡಿರುವುದು ಸೂಕ್ತವಾಗಿರುತ್ತದೆ.

ಕಡತ ಸಂಖ್ಯೆ: ನಅಇ 68 ಪಿ.ಆರ್.ಜೆ 2025

**(ಡಿ. ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ